ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

40ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ
ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ಭಾರತದಲ್ಲಿ ಹೊಸ ವರ್ಷದಂದು 69 ಸಾವಿರ ಮಕ್ಕಳ ಜನನ

ವಿಶ್ವಸಂಸ್ಥೆಯ ಮಕ್ಕಳ ನಿಧಿ(ಯುನಿಸೆಫ್) ಹೊಸ ವರ್ಷದ ದಿನ ವಿಶ್ವದಲ್ಲಿ ಎಷ್ಟು ಮಕ್ಕಳು ಜನಿಸಿದ್ದಾರೆ ಎಂಬ ಅಂಕಿ ಅಂಶಗಳನ್ನು ಬಿಡುಗಡೆ ಮಾಡಿದ್ದು, ಹೊಸ ವರ್ಷದ ದಿನ ವಿಶ್ವದಲ್ಲಿ ಒಟ್ಟು 386 000 ಮಕ್ಕಳು ಜನಿಸಿದ್ದು, ಭಾರತ ಮೊದಲ ಸ್ಥಾನದಲ್ಲಿದೆ. ಭಾರತದಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆಯ ಪ್ರಮಾಣ ಹೆಚ್ಚಾಗುತ್ತಿದ್ದು, ಈ ವರ್ಷದಂದು 69070 ಮಕ್ಕಳು ಜನಿಸಿದ್ದಾರೆ. 2ನೇ ಸ್ಥಾನದಲ್ಲಿ ಚೀನಾ ಇದ್ದು , ಅಲ್ಲಿ ಹೊಸ ವರ್ಷದಂದು 44,760 ಮಕ್ಕಳು ಜನಿಸಿದ್ದಾರೆ. ಇನ್ನು ನೈಜೀರಿಯಾ ಮೂರನೇ ಸ್ಥಾನದಲ್ಲಿದ್ದು, 20,210 ಮಕ್ಕಳು ಜನಿಸಿದ್ದಾರೆ.



ಅಂತರ್‌ಧರ್ಮೀಯ ವಿವಾಹಗಳಿಗೆ ಪ್ರೋತ್ಸಾಹ ಧನ ಇಲ್ಲ

ಅಂತರ್‌ಧರ್ಮೀಯ ವಿವಾಹಗಳಿಗೆ ಪ್ರೇರಕ ಸಂಭಾವನೆ ನೀಡುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ವಿನಯ್ ಸಂಪ್ಲಾ ತಿಳಿಸಿದ್ದಾರೆ. ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಆದರೆ, ಅದೇ ರೀತಿ ಅಂತರ್‌ಧರ್ಮೀಯ ಮದುವೆಗಳಿಗೆ ಈ ಸೌಲಭ್ಯ ವಿಸ್ತರಿಸುವ ಉದ್ದೇಶ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ ಎಂದರು.

ಮಹಿಳೆಯರ ಕಳ್ಳ ಸಾಗಾಣಿಕೆಯಲ್ಲಿ ಮಂಗಳೂರು ನಂ.1!

ಮಹಿಳೆಯರ ಕಳ್ಳ ಸಾಗಣೆ, ವೇಶ್ಯಾವಾಟಿಕೆಯಂತಹ ಗಂಭೀರ ಪ್ರಕರಣಗಳು ಮಂಗಳೂರಿನಲ್ಲಿ ದಾಖಲಾಗಿವೆ ಎಂದು ರಾಜ್ಯ ಮಹಿಳಾ ಆಯೋಗ ಹೇಳಿದೆ. ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚು ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದು, ರಾಮನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ಬಹು ಪತ್ನಿತ್ವ ಪ್ರಕರಣ ದಾಖಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರೇಮ ಪ್ರಕರಣಗಳು ದಾಖಲಾಗಿವೆ ಎಂದು ಮಾಹಿತಿ ನೀಡಿದೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :42 ಬುಧವಾರ ಜ.3, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20

ವೈದ್ಯರ ಮುಷ್ಕರ : ಖಾಸಗಿ ಕ್ಲಿನಿಕ್ ಬಂದ್

ಐ.ಎಂ.ಎ. ಜಿಲ್ಲಾ ಶಾಖೆ, ವೈದ್ಯ ವಿದ್ಯಾರ್ಥಿಗಳಿಂದ ಮೆರವಣಿಗೆ

ಹಾಸನ : ರಾಷ್ಟ್ರೀಯ ವೈದ್ಯ ಆಯೋಗ ಮಸೂದೆ ರಚನೆ ವಿರೋಧಿಸಿ ದೇಶವ್ಯಾಪಿ ಭಾರತೀಯ ವೈದ್ಯಕೀಯ ಒಕ್ಕೂಟವು ಖಾಸಗಿ ನರ್ಸಿಂಗ್ ಹೋಂ ಹಾಗೂ ಕ್ಲಿನಿಕ್‌ಗಳ ಒಪಿಡಿ ಬಂದ್‌ಗೆ ಕರೆ ನೀಡಿದ್ದು , ಜಿಲ್ಲೆಯಲ್ಲಿಯೂ ಮಂಗಳವಾರ ಕ್ಲಿನಿಕ್‌ಗಳು ಬಂದ್ ಆಗಿದ್ದವು.

ನಗರ ಸೇರಿದಂತೆ ತಾಲ್ಲೂಕು ಕೇಂದ್ರಗಳಲ್ಲಿ ಖಾಸಗಿ ಕ್ಲಿನಿಕ್‌ಗಳು ಬಂದ್ ಆಗಿದ್ದವು. ಕೆಲವು ನರ್ಸಿಂಗ್ ಹೋಂಗಳು ಕೂಡ ಕರ್ತವ್ಯ ನಿರ್ವಹಿಸಲಿಲ್ಲ. ಖಾಸಗಿ ವೈದ್ಯರು ಸಾಂಕೇತಿಕವಾಗಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಭಾರತೀಯ ವೈದ್ಯಕೀಯ ಒಕ್ಕೂಟವು ಖಾಸಗಿ ಆಸ್ಪತ್ರೆಗಳ ಹೊರರೋಗಿ ವಿಭಾಗವನ್ನು ಬೆಳಿಗ್ಗೆ 6 ರಿಂದ ಸಂಜೆ 6ರವರೆಗೆ ಒಟ್ಟು 12 ಗಂಟೆಗಳ ಕಾಲ ಮುಚ್ಚಿ ಮುಷ್ಕರ ನಡೆಸುವಂತೆ ಕರೆ ನೀಡಿತ್ತು. ಆದರೆ ತುರ್ತು ವಿಭಾಗಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು.

ಕಳೆದ ಶುಕ್ರವಾರ 'ವೈದ್ಯ ಆಯೋಗ ಮಸೂದೆ ' ಲೋಕಸಭೆಯಲ್ಲಿ ಮಂಡನೆಯಾಗಿತ್ತು. ವಿಧೇಯಕದ ಅನುಸಾರ ಭ್ರಷ್ಟಾಚಾರದ ಆರೋಪ ಹೊತ್ತಿರುವ ಭಾರತೀಯ ವೈದ್ಯಕೀಯ ಪರಿಷತ್ತು (ಎಂಸಿಐ) ರದ್ದಾಗಲಿದ್ದು, ಇದರ ಬದಲಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಅಸ್ತಿತ್ವಕ್ಕೆ ಬರಲಿದೆ.

ಜಿಲ್ಲಾ ವೈದ್ಯಕೀಯ ಒಕ್ಕೂಟದ ವೈದ್ಯ ವಿದ್ಯಾರ್ಥಿಗಳು ನಗರದಲ್ಲಿ ಮಂಗಳವಾರ ಮೆರವಣಿಗೆ ನಡೆಸಿದರು. ಖಾಸಗಿ ವೈದ್ಯರುಗಳು ಒಪಿಡಿ ಬಂದ್ ಮಾಡಿ ಸಾಂಕೇತಿಕ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದರು. ಬೆಳಿಗ್ಗೆ ಮೆರವಣಿಗೆ ನಡೆಸಿದ ನಂತರ ಅಪರ ಜಿಲ್ಲಾಧಿಕಾರಿಗಳಿಗೆ ಈ ಕುರಿತು ಮನವಿ ಸಲ್ಲಿಸಲಾಯಿತು. ಮೆರವಣಿಗೆಯ ನೇತೃತ್ವವನ್ನು ಐ.ಎಂ.ಎ. ಜಿಲ್ಲಾಧ್ಯಕ್ಷ ಡಾ॥ನಾಗೇಶ್ ವಹಿಸಿದ್ದರು. ಹಿರಿಯ ವೈದ್ಯರಾದ ಡಾ॥ಲಿಂಗರಾಜು, ಡಾ॥ಜನಾರ್ಧನ್, ಮಕ್ಕಳ ವೈದ್ಯ ಡಾ॥ಪಾಲಾಕ್ಷ , ಜನಪ್ರಿಯ ಆಸ್ಪತ್ರೆಯ ಡಾ॥ಅಬ್ದುಲ್ ಬಷೀರ್ ಸೇರಿದಂತೆ ಹಲವು ವೈದ್ಯರು ಪಾಲ್ಗೊಂಡಿದ್ದರು.

ಭಾರತೀಯ ವೈದ್ಯಕೀಯ ಸಂಘ
INDIAN MEDICAL ASSOCIATION
NMC

'ವೈದ್ಯಕೀಯ ಚಿಕಿತ್ಸೆ ಗುಣಮಟ್ಟ ಅಧೋಗತಿಗೆ'

ಹಾಸನ : ರಾಷ್ಟ್ರೀಯ ವೈದ್ಯಕೀಯ ಆಯೋಗ ರಚನೆಯಾದಲ್ಲಿ ಮುಂಬರುವ ದಿನಗಳಲ್ಲಿ ದೇಶದಲ್ಲಿ ವೈದ್ಯಕೀಯ ಚಿಕಿತ್ಸೆ ಗುಣಮಟ್ಟ ಅಧೋಗತಿಗೆ ಇಳಿಯಲಿದೆ ಎಂದು ಭಾರತೀಯ ವೈದ್ಯಕೀಯ ಒಕ್ಕೂಟದ ಜಿಲ್ಲಾಧ್ಯಕ್ಷ ಡಾ॥ಕೆ.ನಾಗೇಶ್ ಆತಂಕ ವ್ಯಕ್ತಪಡಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಆಯೋಗದ ಪ್ರಕಾರ ಮುಂದಿನ ದಿನಗಳಲ್ಲಿ ಆಯುರ್ವೇದ ಸೇರಿದಂತೆ ಇತರೆ ಪದ್ಧತಿಯ ವೈದ್ಯರುಗಳು ಕೂಡ ಕೆಲವೇ ದಿನಗಳಲ್ಲಿ ತರಬೇತಿ ಪಡೆದು ಅಧಿಕೃತವಾಗಿ ಆಧುನಿಕ ಆಲೋಪತಿ ವೈದ್ಯಕೀಯ ಪದ್ಧತಿಯಂತೆ ಚಿಕಿತ್ಸೆ ನೀಡಲು ಅವಕಾಶ ಮಾಡಿಕೊಡಲಾಗಿದೆ. ಇದು ಸರಿಯಾದ ಕ್ರಮ ಎಂದು ಹೇಳಿದರು.

ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಸಂಸ್ಥೆಯನ್ನು ಮುಚ್ಚಿ , ನ್ಯಾಷನಲ್ ಕಮಿಷನ್ ಅನ್ನು ಜಾರಿಗೆ ತರುವ ಅವೈಜ್ಞಾನಿಕ ಕಾಯ್ದೆಯನ್ನು ಸಂಸತ್‌ನ ಅಧಿವೇಶನದಲ್ಲಿ ಮಂಡಿಸಲಾಗಿದೆ. ಇದು ಅತ್ಯಂತ ದುರದೃಷ್ಟಕರ ಸಂಗತಿ. ಇದನ್ನು ವಿರೋಧಿಸಿ ದೇಶಾದ್ಯಂತ ಭಾರತೀಯ ವೈದ್ಯಕೀಯ ಸಂಘದಿಂದ ಕರಾಳ ದಿನ ಆಚರಿಸಲಾಗುತ್ತಿದೆ ಎಂದರು.

ಜಾರಿಯಾಗಿರುವ ಕಾಯ್ದೆ ಪ್ರಜಾತಂತ್ರ ಹಾಗೂ ಜನವಿರೋಧಿ ಕಾಯ್ದೆಯಾಗಿದ್ದು , ಇದರಿಂದ ಮೆಡಿಕಲ್ ವಿದ್ಯಾರ್ಥಿಗಳಿಗೆ, ಬಡ ರೋಗಿಗಳಿಗೆ ಅನ್ಯಾಯವಾಗಲಿದೆ ಎಂದರು.

ಇಂತಹ ಅವೈಜ್ಞಾನಿಕ, ಪ್ರಜಾತಂತ್ರ ವಿರೋಧಿ, ಜನವಿರೋಧಿ ಮಸೂದೆಯನ್ನು ಭಾರತೀಯ ವೈದ್ಯ ಸಂಘ ಒಕ್ಕೊರಲಿನಿಂದ ಖಂಡಿಸುತ್ತದೆ. ಅದನ್ನು ಜಾರಿಗೆ ತರದಂತೆ ಹಾಗೂ ಈಗ ಕಾರ್ಯ ನಿರ್ವಹಿಸುತ್ತಿರುವ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ್ನು ಮುಂದುವರೆಸುವಂತೆ ಆಗ್ರಹಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಐ.ಎಂ.ಎ. ಕಾರ್ಯದರ್ಶಿ ಜೆ.ಕೆ.ಯತೀಶ್ ಕುಮಾರ್, ರಾಜ್ಯ ಉಪಾಧ್ಯಕ್ಷೆ ಭಾರತಿ ರಾಜಶೇಖರ್, ಜಂಟಿ ಕಾರ್ಯದರ್ಶಿ ಡಾ॥ಸಾವಿತ್ರಿ, ಹಿರಿಯ ವೈದ್ಯ ಡಾ॥ನಾಗೇಶ್ ಇನ್ನಿತರರು ಹಾಜರಿದ್ದರು.

ಬೀದಿನಾಯಿ ಹಿಡಿಯಲು 1 ಲಕ್ಷ ರೂ.ಹಣ ದುರುಪಯೋಗ : ಆರೋಪ

ಸಕಲೇಶಪುರ : ಬೀದಿ ನಾಯಿ ಹಿಡಿಯುವ ಪ್ರಕರಣದಲ್ಲಿ 1 ಲಕ್ಷ ರೂ. ಹಣವನ್ನು ಪುರಸಭೆ ಅಕ್ರಮ ನಡೆಸಿದೆ ಹಾಗೂ ನಾಯಿ ಹಿಡಿಯುವಲ್ಲಿ ಪುರಸಭೆ ವಿಫಲವಾದ ಕಾರಣ ನಾಗರಿಕರು ನಾಯಿಗಳಿಗೆ ಬಲಿಯಾಗುತ್ತಿದ್ದಾರೆಂದು ಆರೋಪಿಸಿ ವಿವಿಧ ಸಂಘಟನೆಗಳ ಮುಖಂಡರು ಪಟ್ಟಣದ ಪುರಭವನದ ಮುಂಭಾಗ ಮಂಗಳವಾರ ನಾಯಿಗಳ ಜೊತೆ ಪ್ರತಿಭಟನೆ ನಡೆಸಿದರು.

ಇತ್ತೀಚೆಗೆ ಬೀದಿನಾಯಿಗಳನ್ನು ಹಿಡಿದಿರುವುದಾಗಿ ಹೇಳಿ ಕೇರಳ ಮೂಲದ ವ್ಯಕ್ತಿಯ ಹೆಸರಿನಲ್ಲಿ 1 ಲಕ್ಷ ರೂ. ಬಿಲ್ ಮಾಡಲಾಗಿದೆ. ಆದರೆ ಬೀದಿ ನಾಯಿಗಳ ಹಲ್ಲೆ ತಪ್ಪಿಲ್ಲ. ಸುಮಾರು 10 ಮಕ್ಕಳು ಕಳೆದ 3 ದಿನಗಳಲ್ಲಿ ನಾಯಿ ಕಡಿತಕ್ಕೆ ಬಲಿಯಾಗಿದ್ದಾರೆಂದು ಪ್ರತಿಭಟನಾಕಾರರು ಆರೋಪಿಸಿದರು.

ಪುರಸಭೆ ನಾಯಿಗಳ ಹೆಸರಿನಲ್ಲಿ ದುಡ್ಡು ತಿನ್ನಲು ಮುಂದಾಗಿರುವುದು ನಾಚಿಕೆಗೇಡು ಎಂದು ದೂರಿದರು.

(-ಪುಟ 4ಕ್ಕೆ)

ವೀರಾಪುರ ಗ್ರಾಮದ ಸುತ್ತಮುತ್ತ ಕಾಡಾನೆಗಳ ಹಾವಳಿ

ಹಾಸನ : ತಾಲ್ಲೂಕಿನ ಸೀಗೆಗುಡ್ಡ ಕಾವಲಿನ ವೀರಾಪುರದ ಇಬ್ಬರು ರೈತರ ಜಮೀನಿನಲ್ಲಿ ಗುಡ್ಡೆ ಹೊಟ್ಟಿದ್ದ ರಾಗಿ ಹುಲ್ಲಿನ ಗುಡ್ಡೆಗಳು ಹಾಗೂ ಇಬ್ಬನಿ ಜೋಳದ ಗುಡ್ಡೆಗಳನ್ನು ಸೋಮವಾರ ರಾತ್ರಿ ಕಿತ್ತು ತಿಂದು ಬಿಸಾಡಿರುವ ಆನೆಗಳು, ಅಲ್ಲೇ ಕಟ್ಟೆಯಲ್ಲಿದ್ದ ನೀರು ಕುಡಿದು ಕಾಡಿನೊಳಗೆ ಸೇರಿಕೊಂಡಿವೆ ಎಂದು ವೀರಾಪುರ ಗ್ರಾಮಸ್ಥರು ತಿಳಿಸಿದ್ದಾರೆ.

ಮಂಗಳವಾರ ಬೆಳಿಗ್ಗೆ 10.30ರ ನಂತರ ದನ ಮೇಯಿಸಲು ಹೋಗಿದ್ದಾಗ ಆನೆಗಳ ಹೆಜ್ಜೆ ಗುರುತುಗಳು, ಎಲ್ಲೆಂದರಲ್ಲಿ ಕಿತ್ತು ಬಿಸಾಡಿದ್ದ ರಾಗಿ ಹುಲ್ಲಿನ ಗುಡ್ಡೆಗಳು ಕಂಡು ಬಂದವು. ಸುಮಾರು 3 ಆನೆಗಳು ಬಂದಿರಬಹುದೆಂದು ಶಂಕಿಸಲಾಗಿದೆ.

ವೀರಾಪುರದ ನಾಗಮ್ಮನವರ ಜಮೀನಿನಲ್ಲಿ ಹೊಟ್ಟಿದ್ದ ಆರು ರಾಗಿ ಹುಲ್ಲಿನ ಗುಡ್ಡೆಗಳು ಹಾಗೂ ಆದಿತ್ಯ ಎಂಬುವವರ ಜಮೀನಿನಲ್ಲಿದ್ದ ಇಬ್ಬನಿ ಜೋಳದ ಗುಡ್ಡೆಗಳನ್ನು ತಿಂದು, ತುಳಿದು ಚೆಲ್ಲಾಡಿವೆ. ಸುಮಾರು 30 ಸಾವಿರ ರೂ. ಬೆಲೆಯ ರಾಗಿ ಹುಲ್ಲಿನ ಗುಡ್ಡೆಗಳನ್ನು ತಿಂದು ನಾಶ ಮಾಡಿವೆ ಎನ್ನಲಾಗಿದೆ.

ರೈತರ ಜಮೀನುಗಳಿಗೆ ನುಗ್ಗಿ ದಾಂಧಲೆ ಮಾಡಿರುವ ಆನೆಗಳು, ಸೀಗೆಗುಡ್ಡ ಕಾವಲಿನ ಸುತ್ತಮುತ್ತ ಗ್ರಾಮಸ್ಥರಲ್ಲಿ ಭಾರೀ ಭಯ ಉಂಟು ಮಾಡಿವೆ. ಸೀಗೆಗುಡ್ಡದ ಸುತ್ತಲೂ ಕಟ್ಟೆಗಳು ಇದ್ದು , ಅವು ಆನೆಗಳ ನೀರಿನ ದಾಹ ತಣಿಸಿದರೆ, ರೈತರ ಜಮೀನಿನಲ್ಲಿರುವ ಬೆಳೆಗಳು ಆನೆಗಳಿಗೆ ಆಹಾರವಾಗುತ್ತಿವೆ. ಈ ಹಿನ್ನೆಲೆಯಲ್ಲಿ ವೀರಾಪುರ, ಕೊಂಡಜ್ಜಿ, ಕಲ್ಕೆರೆ, ಕಡದರವಳ್ಳಿ, ಬಂಟೇನಹಳ್ಳಿ ಮತ್ತು ರಾಯಪುರ ಗ್ರಾಮಸ್ಥರು ಭಾರೀ ಭಯಭೀತರಾಗಿದ್ದಾರೆ. ಯಾವಾಗ ಆನೆಗಳು ನುಗ್ಗಿ ದಾಂಧಲೆ ನಡೆಸುತ್ತವೋ ಎಂಬ ಭಯದಲ್ಲಿ ಗ್ರಾಮಸ್ಥರಿದ್ದು , ಕೂಡಲೇ ಜೀವಹಾನಿ ಆಗುವ ಮುಂಚೆ ಅರಣ್ಯ ಇಲಾಖೆಯವರು ಮುಂಜಾಗ್ರತೆ ವಹಿಸಬೇಕೆಂದು ಒತ್ತಾಯಿಸಲಾಗಿದೆ.

(-4ನೇ ಪುಟಕ್ಕೆ)

ನಾಳೆ ಸಿ.ಎಂ. ಭೇಟಿ : ಪೂರ್ವ ಸಿದ್ಧತೆ ಕುರಿತು ಚರ್ಚೆ

ಹಾಸನ : ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನವರಿ 4ರಂದು ಹಾಸನ ಜಿಲ್ಲೆಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಅಧಿಕಾರಿಗಳೊಂದಿಗೆ ಮಂಗಳವಾರ ಚರ್ಚಿಸಿ ಪೂರ್ವ ಸಿದ್ಧತೆಗಳ ಕುರಿತು ಮಾಹಿತಿ ಪಡೆದರು.

ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮುಖ್ಯಮಂತ್ರಿಗಳು ಅರಸೀಕೆರೆ, ಬೇಲೂರು ಹಾಗೂ ಅರಕಲಗೂಡಿಗೆ ಆಗಮಿಸುತ್ತಿದ್ದು, ಈ ಮೂರು ಕಡೆಗಳಲ್ಲಿ ಯಾವುದೇ ಲೋಪವಿಲ್ಲದಂತೆ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಖ್ಯಮಂತ್ರಿ ಜಿಲ್ಲಾ ಪ್ರವಾಸ ಸಂದರ್ಭದಲ್ಲಿ ಮೂರು ತಾಲ್ಲೂಕುಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದು , ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವ ಕುರಿತು ಉಪವಿಭಾಗಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಹಾಗೂ ಡಾ.ಹೆಚ್.ಎಲ್ ನಾಗರಾಜ್ ಮತ್ತು ಆಯಾಯ ತಾಲ್ಲೂಕುಗಳ ತಹಸೀಲ್ದಾರ್‌ರಿಂದ ಜಿಲ್ಲಾಧಿಕಾರಿಗಳು ಮಾಹಿತಿ ಪಡೆದರು.

ಜ.4 ರಂದು ಬೆಳಗ್ಗೆ 10.45 ಗಂಟೆಗೆ ಅರಸೀಕೆರೆ ತಾಲ್ಲೂಕು ಜೇನುಕಲ್ ನಗರ ಕ್ರೀಡಾಂಗಣಕ್ಕೆ ಹೆಲಿಪ್ಯಾಡ್ ಮೂಲಕ ಮುಖ್ಯಮಂತ್ರಿಗಳು ಆಗಮಿಸುವರು. ನಂತರ ಮಧ್ಯಾಹ್ನ 12.45ಕ್ಕೆ ಬೇಲೂರಿನ ವೈಡಿಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೈದಾನ ಹಾಗೂ ಮಧ್ಯಾಹ್ನ 3.45ಕ್ಕೆ ಅರಕಲಗೂಡಿನ ಸರ್ಕಾರಿ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸುವರು ಎಂದರು.

ಮೂರು ಕಾರ್ಯಕ್ರಮಗಳನ್ನು ವಾರ್ತಾ ಇಲಾಖೆ ಮೂಲಕ ಜಿಲ್ಲೆ ಹಾಗೂ ಪ್ರತಿಯೊಂದು ತಾಲ್ಲೂಕಿನಲ್ಲಿ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳು, ಅನುಷ್ಠಾನಗೊಂಡಿರುವ ಯೋಜನೆಗಳ ಬಗ್ಗೆ ಮಾಹಿತಿಯನ್ನೊಳಗೊಂಡ ಪ್ರತ್ಯೇಕ ಪುಸ್ತಕಗಳನ್ನು ಮುದ್ರಿಸಿ ಬಿಡುಗಡೆ ಮಾಡಲು ಜಿಲ್ಲಾಧಿಕಾರಿ ತಿಳಿಸಿದರು.

(-ಪುಟ 4ಕ್ಕೆ)

ಕೆರೆ ಪುನಶ್ಚೇತನಕ್ಕೆ ಒತ್ತಾಯಿಸಿ ಇಂದು ಧರಣಿ ಸತ್ಯಾಗ್ರಹ

ಹಾಸನ : ಚನ್ನಪಟ್ಟಣ, ಹುಣಸಿನಕೆರೆ ಹಾಗೂ ಸತ್ಯವಂಗಲ ಕೆರೆಗಳ ಪುನಶ್ಚೇತನಕ್ಕೆ ಆಗ್ರಹಿಸಿ ಹಾಸನ ಜಿಲ್ಲಾ ಹಿರಿಯ ನಾಗರಿಕ ವೇದಿಕೆ ಆಶ್ರಯದಲ್ಲಿ ಜ.3ರ ಬುಧವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ಸತ್ಯಾಗ್ರಹ ನಡೆಯಲಿದೆ.

ಈ ಸತ್ಯಾಗ್ರಹದಲ್ಲಿ ಹಿರಿಯ ನಾಗರಿಕರು, ಸಂಘ ಸಂಸ್ಥೆಗಳ ಸದಸ್ಯರು ಪಾಲ್ಗೊಳ್ಳಬೇಕೆಂದು ವೇದಿಕೆಯ ಸಂಚಾಲಕ ಬಿ.ಕೆ.ಮಂಜುನಾಥ್ ತಿಳಿಸಿದ್ದಾರೆ.

ಬೆಂಬಲ : ಜಿಲ್ಲಾಧಿಕಾರಿಗಳ ಕಛೇರಿ ಎದುರು ಬುಧವಾರ ನಡೆಯುವ ಧರಣಿ ಸತ್ಯಾಗ್ರಹಕ್ಕೆ ಹಲವು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ.

ಧರಣಿಯಲ್ಲಿ ಭಾರತೀಯ ಜೀವ ವಿಮಾ ನಿಗಮದ ಪ್ರತಿನಿಧಿಗಳ ಹಾಸನ ಒಕ್ಕೂಟ, ಜಿಲ್ಲಾ ಡಾ॥ರಾಜ್ ಅಭಿಮಾನಿಗಳ ಸಂಘ, ಬಾಳೆಹಣ್ಣು ಮಾರಾಟಗಾರರ ಸಂಘ, ಹಸಿರು ಭೂಮಿ ಪ್ರತಿಷ್ಠಾನ ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳು ಪಾಲ್ಗೊಳ್ಳಲಿವೆ.

ನಾಳೆಯಿಂದ ಕಟ್ಟಡ ನಿರ್ಮಾಣ ವಸ್ತುಗಳ ಪ್ರದರ್ಶನ

ಹಾಸನ : ನಗರದ ಎಂ.ಜಿ.ರಸ್ತೆಯಲ್ಲಿರುವ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪದಲ್ಲಿ ಜನವರಿ 4 ರಿಂದ 8ರವರೆಗೂ ಕಟ್ಟಡ ನಿರ್ಮಾಣ ವಸ್ತುಗಳ ಹಾಗೂ ಇಂಟೀರಿಯರ್ ಡಿಸೈನ್‌ಗಳ ಬಿಲ್ಡ್ ಕಾನ್-2018 ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಆರ್ಕಿಟೆಕ್ಟ್ ಅಸೋಸಿಯೇಷನ್ ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಸಂಘದ ಸಂಸ್ಥಾಪಕ ಅಧ್ಯಕ್ಷ ಆರ್.ಬಿ.ದಯಾನಂದ್, ಅಧ್ಯಕ್ಷ ರಮೇಶ್ ಕೊಠಾರಿ, ಕಾರ್ಯದರ್ಶಿ ಎಂ.ಡಿ.ಮಂಜುನಾಥ್ ಇನ್ನಿತರರು ಮಾತನಾಡಿ, ಗುರುವಾರ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಶ್ರೀ ಶಂಭುನಾಥ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು ಎಂದರು.

ಕಾರ್ಯದರ್ಶಿ ಎಂ.ಡಿ.ಮಂಜುನಾಥ್ ಮಾತನಾಡಿ, ಇದೇ ಮೊದಲ ಬಾರಿಗೆ ಆಯೋಜಿಸಿರುವ ಈ ವಸ್ತು ಪ್ರದರ್ಶನದಲ್ಲಿ ಅಲ್ಟ್ರಾಟೆಕ್, ಎಲಿಗೆನ್ಸ್ ಡೆಕೋರರ್ಸ್, ಇಂಡಸ್ ಟಿಎಂಟಿ, ರಾಮ್ಕೋ ಸೇರಿದಂತೆ ಹಲವಾರು ಪ್ರತಿಷ್ಠಿತ ಕಂಪನಿಗಳು ಭಾಗವಹಿಸುತ್ತಿವೆ ಎಂದರು.

(-ಪುಟ 4ಕ್ಕೆ)

ಎಂ ಸ್ಯಾಂಡ್ ಬಳಕೆ ಉತ್ಕೃಷ್ಟವಾದುದು

ಕಟ್ಟಡ, ಮನೆ ನಿರ್ಮಾಣಕ್ಕೆ ಎಂ ಸ್ಯಾಂಡ್ ಬಳಕೆ ಅತ್ಯುತ್ತಮವಾದುದು ಎಂದು ಆರ್.ಬಿ.ದಯಾನಂದ್ ಪ್ರತಿಕ್ರಿಯಿಸಿದರು.

ಗ್ರಾಹಕರಲ್ಲಿ ಈ ಕುರಿತು ಗೊಂದಲವಿದೆ. ಯಾರೂ ಕೂಡ ಗೊಂದಲಕ್ಕೊಳಗಾಗಬಾರದು. ಎಂ ಸ್ಯಾಂಡ್ ಬಳಸಿದರೆ ಮನೆ, ಕಟ್ಟಡಗಳು ಸುರಕ್ಷಿತವಾಗಿರುತ್ತವೆ. ಕಳೆದ 20 ವರ್ಷದ ಹಿಂದೆಯೇ ಮುಂಬೈ ಮತ್ತಿತರ ಮಹಾನಗರಗಳಲ್ಲಿ ಎಂ ಸ್ಯಾಂಡ್ ಬಳಸಲಾಗುತ್ತಿತ್ತು ಎಂದರು.

ಕಡಿಮೆ ವೆಚ್ಚದಲ್ಲಿ ಉತ್ತಮ ಮನೆ ನಿರ್ಮಾಣ ಸಾಧ್ಯ. ಆದರೆ ಹಲವರು ಅನಗತ್ಯವಾಗಿ ಕಚ್ಚಾ ವಸ್ತುಗಳನ್ನು ಉಪಯೋಗಿಸುತ್ತಾರೆ. ಹೀಗಾಗಿಯೇ ವೆಚ್ಚ ಅಧಿಕವಾಗುತ್ತದೆ. ಆರ್ಕಿಟೆಕ್ಟ್ ಸಲಹೆಯಂತೆ ಮಾಡಿದರೆ ನಿಜವಾಗಿಯೂ ಕಡಿಮೆ ವೆಚ್ಚದಲ್ಲಿ ಕಾಮಗಾರಿ ಮುಗಿಸಬಹುದು ಎಂದು ಹೇಳಿದರು.

ಬೇಲೂರು ಕ್ಷೇತ್ರ : ವೈ.ಎನ್.ರುದ್ರೇಶಗೌಡರೇ ಕಾಂಗ್ರೆಸ್ ಅಭ್ಯರ್ಥಿ

▯ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಅವರಿಂದಲೇ ಸ್ಪಷ್ಟನೆ

ಬೇಲೂರು : ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ ಅವರುಗಳು ಹಾಲಿ ಶಾಸಕ ವೈ.ಎನ್.ರುದ್ರೇಶಗೌಡರಿಗೆ ಮುಂದಿನ ಚುನಾವಣೆಯಲ್ಲಿಯೂ ನೀವೇ ಅಭ್ಯರ್ಥಿ ಎಂದು ತಿಳಿಸಿರುವುದರಿಂದ ಮುಂದಿನ ಚುನಾವಣೆಯಲ್ಲಿ ಶಾಸಕ ವೈ.ಎನ್. ರುದ್ರೇಶಗೌಡರೇ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ ಎಂದು ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಾವಗಲ್ ಮಂಜುನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 2013ರ ವಿಧಾನ ಸಭಾ ಚುನಾವಣೆಯಲ್ಲಿ ವಿಶ್ವಾಸಕ್ಕಾಗಿ ಮತ ಕೇಳಿದ್ದೆವು. ಆದರೆ 2018ರ ಚುನಾವಣೆಯಲ್ಲಿ ರಾಜ್ಯದ ವಿಕಾಸಕ್ಕಾಗಿ ಮತ ಕೇಳುತ್ತೇವೆ. ಕಾರಣ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣೆಗೂ ಮುನ್ನ ಕೊಟ್ಟ ಮಾತಿನಂತೆ ನಡೆದಿದೆ. ಹಗರಣ ಮುಕ್ತ ಸರ್ಕಾರವಾಗಿದೆ. ಬಸವ ಜಯಂತಿಯಂದು ಅಧಿಕಾರ ಸ್ವೀಕರಿಸಿದ ಮುಖ್ಯಮಂತ್ರಿಗಳು, ಬುದ್ಧ , ಬಸವ ಪೈಗಂಬರ್ ಅವರ ತತ್ವವನ್ನು ಪಾಲಿಸುತ್ತಿದ್ದಾರೆ. ಸಾಧನ ಸಂಭ್ರಮ ಕಾರ್ಯಕ್ರಮದಡಿ ಜ.4ರಂದು ಮುಖ್ಯಮಂತ್ರಿಗಳು ಬೇಲೂರಿಗೆ ಆಗಮಿಸುತ್ತಿದ್ದು , ಅಂದು ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದರು.

ಬೇಲೂರಿನ ಚನ್ನಕೇಶವ ದೇವಾಲಯಕ್ಕೆ 900 ವರ್ಷ ತುಂಬಿದ ಕಾರಣ ದೇವಾಲಯದ ಅಭಿವೃದ್ಧಿಗೆ 50 ಕೋಟಿ ಅನುದಾನ ನೀಡುವಂತೆ ಸಿ.ಎಂ.ಗೆ ಮನವಿ ಮಾಡಲಾಗುವುದು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಜನರಲ್ಲಿ ಹೆಚ್ಚಿನ ಒಲವಿರುವ ಕಾರಣ ಪಕ್ಷದಲ್ಲಿ ಟಿಕೆಟ್ ಆಕಾಂಕ್ಷಿಗಳು ಹೆಚ್ಚಿದ್ದಾರೆ. ಬೇಲೂರು ಕ್ಷೇತ್ರಕ್ಕೆ 8 ರಿಂದ 10 ಜನ ಆಕಾಂಕ್ಷಿಗಳಿದ್ದಾರೆ ಎಂದರು

ಶಾಸಕ ವೈ.ಎನ್.ರುದ್ರೇಶಗೌಡ ಮಾತನಾಡಿ, ನಮ್ಮ ಸರ್ಕಾರದ ಅವಧಿಯಲ್ಲಿ ಬೇಲೂರು ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಮತ್ತಷ್ಟು ಕಾಮಗಾರಿಗಳಿಗೆ ಮುಖ್ಯಮಂತ್ರಿಗಳು ಜನವರಿ 4ರಂದು ಚಾಲನೆ ನೀಡಲಿದ್ದಾರೆ. ಶಾಸಕನಾಗಿ ನಾನು ಸುಮ್ಮನೆ ಮನೆಯಲ್ಲಿ ಕುಳಿತಿಲ್ಲ. ಸಾಧ್ಯವಾದಷ್ಟು ಕೆಲಸ ಮಾಡಿದ್ದೇನೆ. ಎತ್ತಿನಹೊಳೆ ಯೋಜನೆಯಿಂದ ಹಳೇಬೀಡು, ಮಾದಿಹಳ್ಳಿ ಹಾಗೂ ಜಾವಗಲ್ ಹೋಬಳಿಗಳಿಗೆ ಕುಡಿಯುವ ನೀರು ಕೊಡಲು ಸಾಕಷ್ಟು ಶ್ರಮಿಸಿದ್ದೇನೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪೂರ್ಣೇಶ್, ಕಾರ್ಯಾಧ್ಯಕ್ಷ ಮಂಜುನಾಥ್, ಬೇಲೂರು-ಹಳೇಬೀಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಮಾಲುದ್ದೀನ್ ಇದ್ದರು.

> "2018ರ ಚುನಾವಣೆಯಲ್ಲಿ ರಾಜ್ಯದ ವಿಕಾಸಕ್ಕಾಗಿ ಮತ ಕೇಳುತ್ತೇವೆ. ಕಾರಣ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಚುನಾವಣೆಗೂ ಮುನ್ನ ಕೊಟ್ಟ ಮಾತಿನಂತೆ ನಡೆದಿದೆ.
>
> -ಜಾವಗಲ್ ಮಂಜುನಾಥ್,
> ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ

> "ಶಾಸಕನಾಗಿ ನಾನು ಸುಮ್ಮನೆ ಮನೆಯಲ್ಲಿ ಕುಳಿತಿಲ್ಲ. ಸಾಧ್ಯವಾದಷ್ಟು ಕೆಲಸ ಮಾಡಿದ್ದೇನೆ. ಎತ್ತಿನಹೊಳೆ ಯೋಜನೆಯಿಂದ ಹಳೇಬೀಡು, ಮಾದಿಹಳ್ಳಿ ಹಾಗೂ ಜಾವಗಲ್ ಹೋಬಳಿಗಳಿಗೆ ಕುಡಿಯುವ ನೀರು ಕೊಡಲು ಸಾಕಷ್ಟು ಶ್ರಮಿಸಿದ್ದೇನೆ.
>
> -ವೈ.ಎನ್.ರುದ್ರೇಶಗೌಡ, ಶಾಸಕ.

ಶ್ರವಣಬೆಳಗೊಳ : ಪ್ರತಿನಿತ್ಯ 10 ಸಾವಿರ ಮಂದಿ ಭೇಟಿ

ಶ್ರವಣಬೆಳಗೊಳ : ಪ್ರಪಂಚದಲ್ಲಿಯೇ ಅತಿ ಎತ್ತರದ ಏಕಶಿಲಾ ಮೂರ್ತಿಯಾದ ಬಾಹುಬಲಿಗೆ ಮನ ಸೋಲದವರೇ ಇಲ್ಲ. ಬಾಹುಬಲಿಯ ಭಕ್ತರು ಪ್ರತಿದಿನ ಭೇಟಿ ನೀಡಿ ಬಾಹುಬಲಿಯ ಪಾದ ಹಾಗೂ ಪಾದದ ಎದುರುಗಡೆ ಇರುವ ಪಂಚಧಾತುವಿನ ಮೂರ್ತಿಗೆ ನಡೆಯುವ ಅಭಿಷೇಕದಲ್ಲಿ ಪಾಲ್ಗೊಳ್ಳುತ್ತಾರೆ. ಶಾಲಾ ಮಕ್ಕಳು, ದೇಶ ಹಾಗೂ ವಿದೇಶಿ ಪ್ರವಾಸಿಗರು ಸೇರಿ ಪ್ರತಿನಿತ್ಯ 8 ರಿಂದ 10 ಸಾವಿರ ಜನರು ಭೇಟಿ ನೀಡುತ್ತಾರೆ.

ಒಮ್ಮೆ ಪ್ರವಾಸಿಗರು ಭೇಟಿ ನೀಡಿದರೆ ಪುನಃ ಶ್ರವಣಬೆಳಗೊಳದ ವಿಂಧ್ಯಗಿರಿ ಬೆಟ್ಟ ಹತ್ತಿ ಬಾಹುಲಿಯ ಮೂರ್ತಿಯನ್ನು ಕಣ್ತುಂಬಿಕೊಳ್ಳುತ್ತಾರೆ. ಬಾಹುಬಲಿ ಮೂರ್ತಿಗೆ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುವ ಶಕ್ತಿಯಿದೆ. ಕಳೆದ ಒಂದು ವಾರದಿಂದ ಕ್ರಿಸ್‌ಮಸ್ ರಜೆ ಇರುವುದರಿಂದ ರಾಜ್ಯ ಹಾಗೂ ದೇಶದ ನಾನಾ ಮೂಲೆಗಳಿಂದ ಪ್ರವಾಸಿಗರ ದಂಡೇ ಇಲ್ಲಿಗೆ ಭೇಟಿ ಕೊಡುತ್ತಿದೆ.

ಕೆಲವರು ಸೂರ್ಯ ನೆತ್ತಿಯ ಮೇಲೆ ಮೂಡುವಷ್ಟರಲ್ಲಿ ಬೆಟ್ಟ ಹತ್ತಿ ಇಳಿಯಬೇಕೆಂಬ ಲೆಕ್ಕಾಚಾರದಲ್ಲಿದ್ದರೆ, ಬಿಸಿಲಿಗೂ ಅಂಜದೆ ಬೆಟ್ಟ ಹತ್ತುತ್ತಿರುವ ಪ್ರವಾಸಿಗರಿಗೇನೂ ಕೊರತೆಯಿಲ್ಲ. ಹೀಗಾಗಿ ಕ್ರಿಸ್‌ಮಸ್ ರಜಾ ಇರುವ ಕಾರಣ ಸಾವಿರಾರು ಪ್ರವಾಸಿಗರು ಬೆಟ್ಟ ಹತ್ತುವ ದೃಶ್ಯ ಕಾಣಿಸುತ್ತಿದೆ.

ಬೆಟ್ಟಕ್ಕೆ ಬರುವ ಪ್ರವಾಸಿಗರ ವಾಹನಗಳ ನಿಲುಗಡೆ ಸುಂಕ ವಿಧಿಸಲು 13.5 ಲಕ್ಷಕ್ಕೆ ಗ್ರಾಮ ಪಂಚಾಯಿತಿಯಿಂದ ಹರಾಜು ಕೂಗಿದ್ದು , ಈ ಆದಾಯ ಗ್ರಾಮ ಪಂಚಾಯಿತಿಗೆ ಸೇರುತ್ತಿದೆ. ಬಸ್ಸುಗಳಿಗೆ 100 ರೂ. ಮತ್ತು ಕಾರುಗಳಿಗೆ 40 ರೂ. ಶುಲ್ಕ ವಿಧಿಸಲಾಗುತ್ತಿದೆ. ಪ್ರತಿನಿತ್ಯವೂ 100ಕ್ಕೂ ಹೆಚ್ಚು ಪ್ರವಾಸಿ ಬಸ್‌ಗಳು, ಕಾರುಗಳು, ಮಿನಿ ಬಸ್‌ಗಳು ಆಗಮಿಸುತ್ತಿವೆ.

ಮಹಾಮಸ್ತಕಾಭಿಷೇಕ ನಡೆಯುವ ಸಂದರ್ಭ ಇಲ್ಲಿ ಜನಜಂಗುಳಿಯಿಂದ ಕೂಡಿರುತ್ತದೆ. ಹಾಗಾಗಿ ಅಷ್ಟು ಸುಲಭವಾಗಿ ಬೆಟ್ಟಕ್ಕೆ ಹೋಗಲು ಸಾಧ್ಯವಿಲ್ಲ ಫೋಟೋ ಕ್ಲಿಕ್ಕಿಸಲು ಆಗುವುದಿಲ್ಲ . ಈ ಸಮಯದಲ್ಲಿ ಆರಾಮವಾಗಿ ವೈರಾಗ್ಯ ಮೂರ್ತಿಯಾದ ಭಗವಾನ್ ಬಾಹುಬಲಿ ಸ್ವಾಮಿಯ ಮೂರ್ತಿಯನ್ನು ಕಣ್ತುಂಬಿಕೊಳ್ಳಬಹುದು ಎಂಬ ಕಾರಣದಿಂದಲೇ ಬಹಳಷ್ಟು ಪ್ರವಾಸಿಗರು ಆಗಮಿಸುತ್ತಿದ್ದಾರೆ. ವಿಂಧ್ಯಗಿರಿ ಬೆಟ್ಟದೆತ್ತರ ಎಲ್ಲಿ ನೋಡಿದರೂ ಪ್ರವಾಸಿಗರ ದಂಡು ಕಾಣಿಸುತ್ತದೆ.

ಇನ್ನು ಬೆಟ್ಟ ಹತ್ತಲಾಗದ ಹಿರಿಯರಿಗೆ ಹಾಗೂ ಅಂಗವಿಕಲರಿಗೆ, ಬೆಟ್ಟ ಹತ್ತಿ ಮೂರ್ತಿಯನ್ನು ನೋಡಲಾಗದವರಿಗೆ, ಡೋಲಿ ವ್ಯವಸ್ಥೆ ಕಲ್ಪಿಸಲಾಗಿದೆ, ಒಟ್ಟಾರೆ ಮಹಾ ಮಸ್ತಕಾಭಿಷೇಕ ಸಿದ್ಧತೆಯ ನಡುವೆಯೇ ಶ್ರವಣಬೆಳಗೊಳದಲ್ಲಿ ಎಲ್ಲಿ ನೋಡಿದರೂ ಸಂಭ್ರಮ ಮನೆ ಮಾಡಿದೆ.

ಪ್ರವಾಸಿಗರ ಆಗಮನದಿಂದ ವ್ಯಾಪಾರ ವಹಿವಾಟು ಚುರುಕುಗೊಂಡಿದ್ದು, ಬಿಸಿಲಿನಿಂದ ದಣಿದವರು ಎಳನೀರು ಹಾಗೂ ಐಸ್‌ಕ್ರೀಮ್ ಮೊರೆ ಹೋಗುತ್ತಿದ್ದಾರೆ.

(-ಪುಟ 4ಕ್ಕೆ)

ಸಿ.ಎಂ. ಕಾರ್ಯಕ್ರಮದಲ್ಲಿ ಕಪ್ಪು ಪಟ್ಟಿ ಪ್ರದರ್ಶನ : ಬೆದರಿಕೆ

ಹಾಸನ : ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ ಬೇಲೂರಿನಲ್ಲಿ ಭಾಗವಹಿಸುವ ಸಾಧನ ಸಮಾವೇಶದಲ್ಲಿ ಕಪ್ಪುಪಟ್ಟಿ ಪ್ರದರ್ಶನ ಮಾಡುವುದಾಗಿ ಜೆ.ಡಿ.ಎಸ್. ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಬೆದರಿಕೆ ಹಾಕಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಅವರು ಮಾತನಾಡಿ, ಎತ್ತಿನಹೊಳೆ ಸಂಬಂಧ ಎಲ್ಲಾ ಕಡೆ ನೀರು ಹರಿಸುವುದಾಗಿ ಕಾಂಗ್ರೆಸ್ ಸುಳ್ಳು ಹೇಳಿಕೆ ಕೊಟ್ಟಿದೆ. ರೈತರ ಪರ ಕೆಲಸ ಮಾಡಿದರೆ ನಾವೇ ಬೆಂಬಲಿಸುತ್ತೇವೆ. ಏನಾದರೂ ಜೆಡಿಎಸ್ ಪಕ್ಷದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದರೆ ಕಾರ್ಯಕರ್ತರು ಪ್ರತಿಭಟಿಸುವುದು ನಿಶ್ಚಿತ ಎಂದರು.

ಸಾರ್ವಜನಿಕರ ತೆರಿಗೆ ಹಣದಲ್ಲಿ ನಡೆಯುವ ಸಮಾರಂಭಗಳನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವುದು ಸರಿಯಲ್ಲ . ನಾಲ್ಕೂವರೆ ವರ್ಷಗಳಿಂದ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಜಿಲ್ಲೆಯ ಅಭಿವೃದ್ಧಿಗಾಗಿ ಏನು ಮಾಡಿದೆ ಎಂಬುದನ್ನು ಸಾಬೀತುಪಡಿಸಬೇಕು ಎಂದು ಸವಾಲು ಹಾಕಿದರು.

ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಎಷ್ಟೋ ಹೋರಾಟ ನಡೆಸಿದರೂ ಪ್ರಯೋಜನವಾಗಲಿಲ್ಲ . ರಾಜ್ಯ ಸರ್ಕಾರ ಜಿಲ್ಲೆಯ ಅಭಿವೃದ್ಧಿ ಮಾಡಲೇ ಇಲ್ಲ. ರೈಲ್ವೆ ಮೇಲ್ಸೇತುವೆ ಸೇರಿದಂತೆ ಹಲವಾರು ಯೋಜನೆಗಳಿಗೆ ಚಾಲನೆಯೇ ಸಿಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಾಧನಾ ಸಮಾವೇಶದಲ್ಲಿ ಮುಖ್ಯಮಂತ್ರಿಗಳು ಸರ್ಕಾರದ ಸಾಧನೆಗಳನ್ನು ಮಾತ್ರ ತಿಳಿಸಬೇಕೇ ಹೊರತು ಅನ್ಯ ಪಕ್ಷಗಳ ವಿರುದ್ಧ ಟೀಕೆ ಮಾಡಬಾರದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ಎಸ್.ದ್ಯಾವೇಗೌಡ, ಸಂಗಮ್, ನಗರಸಭೆ ಮಾಜಿ ಅಧ್ಯಕ್ಷ ಅಕ್ಬರ್ ಪಾಷ ಹಾಗೂ ಜಿಲ್ಲಾ ವಕ್ತಾರ ರಘು ಹೊಂಗೆರೆ ಇತರರು ಇದ್ದರು.

ಬೇಲೂರು : ಭವಾನಿ ರೇವಣ್ಣ ಕೂಡ ಆಕಾಂಕ್ಷಿ

ಬೇಲೂರು ಕ್ಷೇತ್ರದಲ್ಲಿ ನಾನೂ ಸೇರಿದಂತೆ ಹಲವಾರು ಆಕಾಂಕ್ಷಿಗಳಿದ್ದಾರೆ ಎಂದು ಲಿಂಗೇಶ್ ಸ್ಪಷ್ಟಪಡಿಸಿದರು.

ಭವಾನಿ ರೇವಣ್ಣ ಕೂಡ ಪ್ರಬಲ ಆಕಾಂಕ್ಷಿ. ಆದರೆ ಟಿಕೆಟ್ ಹಂಚಿಕೆ ವಿಚಾರ ವರಿಷ್ಠರಿಗೆ ಬಿಟ್ಟಿದ್ದು. ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ ಎಂದು ಪ್ರತಿಕ್ರಿಯಿಸಿದರು.

ಹೊರಗಿನವರು ಬೇಲೂರಿನಲ್ಲಿ ಸ್ಪರ್ಧಿಸಿದರೆ ವಿರೋಧ ವ್ಯಕ್ತಪಡಿಸುವುದಾಗಿ ವಿವಿಧ ಸಂಘಟನೆಗಳು ಈಗಾಗಲೇ ಹೇಳಿಕೆ ನೀಡಿರುವ ಬಗ್ಗೆ ಲಿಂಗೇಶ್ ಪ್ರತಿಕ್ರಿಯಿಸಲು ನಿರಾಕರಿಸಿದರು.

ಜಿಲ್ಲಾದ್ಯಂತ ಕುಡಿಯುವ ನೀರಿಗೆ ಸಮಸ್ಯೆ ಇದೆ. ಆದರೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಹಾಸನ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಎಸ್.ದ್ಯಾವೇಗೌಡ ಹೇಳಿದರು.